[12/31, 11:31 AM] Suresh: ಅಂಕಣಗಳು » ಅಭಿಮತ

ಪಂಚಾಯತ್‌ಗಳಿಗೆ ಬಲ ಬಂದಿದೆ; 2016ರಲ್ಲಿ ಬದಲಾವಣೆಯ ಕನಸು

ಉದಯವಾಣಿ, Dec 30, 2015, 9:41 AM IST

ಪಂಚಾಯತ್ ಕಾಯ್ದೆ ತಿದ್ದುಪಡಿಯು ವಿಕೇಂದ್ರೀಕರಣಕ್ಕೆ ಸಂದ ಜಯವೆಂದೇ ಹೇಳಬಹುದು. ತಿದ್ದುಪಡಿಯಲ್ಲಿರುವ ನಿಯಮಗಳು ಸಂಪೂರ್ಣವಾಗಿ ಅನುಷ್ಠಾನಗೊಂಡರೆ ಕರ್ನಾಟಕದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯ ಸಬಲೀಕರಣದೊಂದಿಗೆ ಅಬ್ದುಲ್ ನಝೀರ್ ಸಾಬ್, ಎಂ.ವೈ.ಘೋರ್ಪಡೆ, ರಾಮಕೃಷ್ಣ ಹೆಗಡೆ ಇವರೆಲ್ಲರ ದೂರಾಲೋಚನೆ ಸಾಕಾರಗೊಂಡು ಕರ್ನಾಟಕ ಇಡೀ ದೇಶಕ್ಕೆ ಮಾದರಿಯಾಗುವುದರಲ್ಲಿ ಸಂಶಯವಿಲ್ಲ.

ಒಂದು ಕನಸು, ಕನಸನ್ನು ನನಸಾಗಿಸುವ ಛಲ, ಅದಕ್ಕೆ ಪೂರಕವಾದ ಅವಕಾಶಗಳು ಹಾಗೂ ಸಹಕಾರ, ನಿರಂತರ ಪ್ರೋತ್ಸಾಹ ಮತ್ತು ಮಾರ್ಗದರ್ಶನ! ಇವಿಷ್ಟು ದೊರೆತರೆ ಯಾವ ಕನಸಾದರೂ ನನಸಾಗದೇ ಕನಸಾಗಿಯೇ ಇರಲು ಸಾಧ್ಯವೇ? ಮತ್ತೊಂದು ವರ್ಷ ಬರುತ್ತಿದೆ. ಹಿಂದಿನ ವರ್ಷದ ಆರಂಭದಲ್ಲಿ ಹಾಕಿಕೊಂಡ ಕನಸುಗಳು ಈಡೇರಿರಬಹುದು, ಹಾಗೇ ಉಳಿದುಕೊಂಡೇ ಇದ್ದರೂ ಇರಬಹುದು. ಆದರೆ ಈಗ ಮತ್ತೆ ಹೊಸ ಕನಸು ಕಟ್ಟುವ ಕಾಲ; ಕನಸಿನ ಬುತ್ತಿ ಬಿಚ್ಚುವ ಕಾಲ; ಬಿಚ್ಚಿದ ಕನಸು ರೆಕ್ಕೆ ಬಡಿದು ಹಾರುವ ಕಾಲ.

ಸ್ಥಳೀಯ ಸ್ವಾಯತ್ತ ಸರ್ಕಾರವಾದ ಗ್ರಾಮ ಪಂಚಾಯತ್‌ಗಳು ತಮ್ಮ ಹೊಸ ಹಾಗೂ ದಕ್ಷ ಪ್ರತಿನಿಧಿಗಳನ್ನು ಪಡೆದು ಅದರಲ್ಲೂ ಅರ್ಧಕ್ಕಿಂತ ಹೆಚ್ಚು ಮಂದಿ ಮಹಿಳಾ ಪ್ರತಿನಿಧಿಗಳೊಂದಿಗೆ ನವ ಚೈತನ್ಯದಿಂದ ಬದಲಾವಣೆಯ ಕನಸು ಕಾಣುತ್ತಾ ತುದಿಗಾಲಲ್ಲಿ ನಿಂತಿವೆ. ಇಂತಹ ಸಂದರ್ಭದಲ್ಲಿ ಈ ಕನಸಿಗೆ ಸ್ಫೂರ್ತಿಯಾಗಿ, ಪೂರಕವಾಗಿ ಕರ್ನಾಟಕದ ವಿಧಾನ ಮಂಡಲವು ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ಕಾಯಿದೆಯನ್ನು ಅಂಗೀಕರಿಸಿ ರಾಜ್ಯಪಾಲರ ಅಂಕಿತಕ್ಕೆ ಕಳುಹಿಸಿತ್ತು. ಅದಕ್ಕೆ ಅವರು ಸಹಿ ಹಾಕಿ ಗ್ರಾಮ ಸ್ವರಾಜ್ಯದ ಕನಸಿಗೆ ಜೀವ ತುಂಬಿ ಬದಲಾವಣೆಯ ಪರ್ವಾಚರಣೆಯ ಸಂಭ್ರಮಕ್ಕೆ ನಾಂದಿ ಹಾಡಿದ್ದಾರೆ.

ಗ್ರಾ.ಪಂ. ಸದಸ್ಯರು ಹೇಳ್ಳೋದೇನು?
ನಾವು ಕೂಡ ನಮ್ಮೂರಿನ ಜನರಿಗೆ ನಮ್ಮ ಕೈಲಾದ ಕೆಲಸವನ್ನು ಮಾಡಬೇಕೆಂದೇ ಪಂಚಾಯತ್‌ಗೆ ಬಂದಿರುತ್ತೇವೆ, ನಮ್ಮ ಊರಿನವರ ಸಮಸ್ಯೆ ನಮಗೆ ಗೊತ್ತಿದೆ, ಆದರೇನು ಮಾಡುವುದು? ಹಣ ಬೇಕಲ್ಲ! ಬಂದ ಹಣವೆಲ್ಲಾ ವಿದ್ಯುತ್ ಬಿಲ್, ಸಿಬ್ಬಂದಿ ಸಂಬಳಕ್ಕೆ ಹೋಗುತ್ತದೆ. ಕೆಲವೊಮ್ಮೆ ಬರಬೇಕಾದ ಹಣವೂ ಬರುವುದಿಲ್ಲ. ಆದರೆ ಪಂಚಾಯತ್ ವ್ಯಾಪ್ತಿಯಲ್ಲಿ ಏನೇ ಆದರೂ ಜನರು ಕೇಳುವುದು ನಮ್ಮನ್ನೇ. ಹಣ ಬಂದರೂ ನಮ್ಮ ಹಳ್ಳಿಗೆ ಏನು ಬೇಕು, ಯಾವ ಕೆಲಸ ಮುಖ್ಯ ಮತ್ತು ಯಾವುದು ಶೀಘ್ರವಾಗಿ ಆಗಬೇಕು ಅದನ್ನೂ ಮಾಡಲು ಸಾಧ್ಯವಿಲ್ಲ. ಸರ್ಕಾರ ಹಾಕಿಕೊಟ್ಟ ಮಾರ್ಗದರ್ಶಿ ಸೂತ್ರದಲ್ಲೇ ಕೆಲಸ ಮಾಡಬೇಕು ಎನ್ನುತ್ತಾರೆ ಪಿಡಿಓ. ಹೀಗಿರುವಾಗ ಹೇಗೆ ಕೆಲಸ ಮಾಡುವುದು? ಇದು ಗ್ರಾಮ ಪಂಚಾಯ್ತಿ ಸದಸ್ಯರ ಬಾಯಿಯಲ್ಲಿ ಕೇಳಿ ಬರುವ ಸಾಮಾನ್ಯ ಮಾತು.

ಸಮಿತಿ ಏನು ಹೇಳಿತ್ತು?
ಪಂಚಾಯತ್ ರಾಜ್ ವ್ಯವಸ್ಥೆಯ ತೊಡಕುಗಳು ಹಾಗೂ ಸರ್ಕಾರದ ತಲೆಬುಡವಿಲ್ಲದ ಆದೇಶಗಳ ಮೂಲಕ ಸ್ವಾಯತ್ತ ಸರ್ಕಾರ ಎನ್ನುವ ಅರ್ಥವನ್ನೇ ಕಳೆದುಕೊಂಡು ಸಮಸ್ಯೆಗಳನ್ನು ಎದುರಿಸುತ್ತಿರುವ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಆಮೂಲಾಗ್ರ ಬದಲಾವಣೆ ತರುವಲ್ಲಿ ಸರ್ಕಾರ ಸಮಿತಿಯನ್ನು ರಚಿಸಿ ಪಂಚಾಯತ್ ರಾಜ್ ಕಾಯ್ದೆಗೆ ತಿದ್ದುಪಡಿ ತರುವ ನಿಟ್ಟಿನಲ್ಲಿ ದಿಟ್ಟ ಹೆಜ್ಜೆಯನ್ನಿಟ್ಟಿತ್ತು. ಸಮಿತಿಯ ಅಧ್ಯಕ್ಷರನ್ನೂ ಒಳಗೊಂಡಂತೆ 22 ತಜ್ಞರನ್ನೊಳಗೊಂಡ ಸಮಿತಿ ಕರ್ನಾಟಕದಾದ್ಯಂತ ಹಾಗೂ ಕೇರಳ, ಗುಜರಾತ್ ಮುಂತಾದ ರಾಜ್ಯಗಳಲ್ಲೂ ಅಧ್ಯಯನ ಕೈಗೊಂಡು ತಳಮಟ್ಟದ ಪ್ರತಿನಿಧಿಗಳೊಂದಿಗೆ ವಿಭಾಗವಾರು ಸಮಾಲೋಚನಾ ಸಭೆಗಳನ್ನು ನಡೆಸಿ ಅವರಿಂದ ಬಂದ ಹಲವಾರು ಸಲಹೆ-ಸೂಚನೆಗಳನ್ನು ಪರಿಗಣಿಸಿ ಕರ್ನಾಟಕದ ಇತಿಹಾಸದಲ್ಲೇ ಸುದೀರ್ಘವಾದ ಚರ್ಚೆ-ಸಂವಾದಗಳ ಮೂಲಕ ಜನ ಭಾಗವಹಿಸುವಿಕೆಯ ಪ್ರಜಾಪ್ರಭುತ್ವ ಮತ್ತು ವಿಕೇಂದ್ರೀಕೃತ ಪ್ರಜಾಪ್ರಭುತ್ವದ ತತ್ವಕ್ಕೆ ಒತ್ತು ನೀಡಿ ಸುಮಾರು 88 ಶಿಫಾರಸುಗಳೊಂದಿಗೆ ಕರ್ನಾಟಕದಲ್ಲಿ ಗ್ರಾಮ ಸ್ವರಾಜ್ಯದ ಪಥ ಎಂಬ ವರದಿಯನ್ನು ಸಲ್ಲಿಸಿತ್ತು. ಇದಾದ ಒಂದು ವರ್ಷದ ಅನಂತರ ವಿಧಾನ ಮಂಡಲದಲ್ಲಿ ಈ ಮಸೂದೆಯನ್ನು ಅಂಗೀಕರಿಸಲಾಗಿದೆ. ಈಗ ಅದು ಕಾಯ್ದೆಯಾಗಿಯೂ ಜಾರಿಗೆ ಬರುತ್ತಿದೆ.

ಇದು ವಿಕೇಂದ್ರೀಕರಣಕ್ಕೆ, ಸಂವಿಧಾನದ ಆಶಯದಂತೆ ಗ್ರಾಮ ಪಂಚಾಯತ್ ಒಂದು ಗ್ರಾಮ ಸರ್ಕಾರವಾಗಿ ಕಾರ್ಯನಿರ್ವಹಿಸುವಲ್ಲಿ ಗ್ರಾಮಪಂಚಾಯತ್‌ಗಳಿಗೆ ಸಂದ ಜಯವೆಂದೇ ಹೇಳಬಹುದು. ಕಾರಣ ಈ ವರದಿಯಲ್ಲಿರುವ ಶಿಫಾರಸುಗಳು ಸಂಪೂರ್ಣವಾಗಿ ಅನುಷ್ಠಾನಗೊಂಡರೆ ಕರ್ನಾಟಕದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯ ಸಬಲೀಕರಣದೊಂದಿಗೆ ಅಬ್ದುಲ್ ನಝೀರ್ ಸಾಬ್, ಎಂ.ವೈ. ಘೋರ್ಪಡೆ, ರಾಮಕೃಷ್ಣ ಹೆಗಡೆ ಇವರೆಲ್ಲರ ದೂರಾಲೋಚನೆ, ಶ್ರಮ, ಗ್ರಾಮ ಸ್ವರಾಜ್ಯದ ಕನಸನ್ನು ಸಾಕಾರಗೊಳಿಸಲು ಮಾಡಿದ ಪ್ರಯತ್ನಗಳಿಗೆ ಫಲ ದೊರೆತು ಕರ್ನಾಟಕ ಇಡೀ ದೇಶಕ್ಕೆ ಮಾದರಿಯಾಗುವಲ್ಲಿ ಸಂಶಯವಿಲ್ಲ.

ಈ ಕಾಯಿದೆಗೆ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಎಂದು ಹೆಸರಿಸಿರುವುದು ವಿಕೇಂದ್ರೀಕರಣಕ್ಕೆ ಹಾಗೂ ಪಂಚಾಯತ್ ಸ್ವಾಯತ್ತತೆಗೆ ಇರುವ

ಬದ್ಧತೆ ತೋರಿಸುತ್ತದೆ. ಹಾಗೂ ಇದು ತಿದ್ದುಪಡಿ ಮಸೂದೆಯ ಸ್ವರೂಪ ಹಾಗೂ ದಿಕ್ಕನ್ನು ಸೂಚಿಸುತ್ತದೆ.

ಸ್ಥಳೀಯ ಸರಕಾರದ ಸ್ಥಾನ

ಸಾಮಾಜಿಕ ನ್ಯಾಯದ ಆಧಾರದಲ್ಲಿ ಅಸುರಕ್ಷಿತ ವರ್ಗ, ಹಿಂದುಳಿದವರು, ಮಹಿಳೆಯರು ಮಕ್ಕಳು, ವಿಶೇಷ ಸಾಮರ್ಥ್ಯದವರು, ರೈತರು ಮುಂತಾದ ಎಲ್ಲ ವರ್ಗದವರ ಸಬಲೀಕರಣವಾಗಬೇಕು. ಅದಕ್ಕಾಗಿ ಸ್ಥಳೀಯ ಸ್ವಯಂ ಸರ್ಕಾರದ ಘಟಕವಾಗಿ ಜನವಸತಿ ಸಭೆಯನ್ನು ಶಿಫಾರಸು ಮಾಡಿದೆ. ವಾರ್ಡ್ ಸಭೆಯೊಂದಿಗೆ ಗ್ರಾಮ ಸಭೆಯನ್ನು ಸ್ವಯಂ ಸರ್ಕಾರದ ಮೂಲ ಘಟಕವೆಂದು ಪರಿಗಣಿಸಿ ಅದರ ನಿರ್ಣಯಕ್ಕೆ ಎಲ್ಲ ಹಂತದ ಸರ್ಕಾರಗಳ ಬದ್ಧತೆಯನ್ನು ಇಲ್ಲಿ ಹೇಳಲಾಗಿದೆ. ಇವೆಲ್ಲವುಗಳೊಂದಿಗೆ ವಿಶೇಷ ಗ್ರಾಮ ಸಭೆಗಳಿಗೆ ಅವಕಾಶ ನೀಡಲಾಗಿದೆ.

ತಮ್ಮ ಕನಸಿನ ಗ್ರಾಮ, ತಾಲೂಕು ಮತ್ತು ಜಿಲ್ಲಾ ಪಂಚಾಯತ್‌ಗಳನ್ನು ರೂಪಿಸಲು ಪ್ರತಿಯೊಂದು ಪಂಚಾಯತ್‌ಗಳಿಗೆ ತ್ರಿಸ್ತರದ ಮುನ್ನೋಟ ಯೋಜನೆಯ ಶಿಫಾರಸನ್ನು ಮಾಡಲಾಗಿದೆ. ಮತ್ತು ಗ್ರಾಮ ಸಭೆಯಲ್ಲಿ ಆದ್ಯತಾವಾರು ಯೋಜನೆಗಳನ್ನು ರೂಪಿಸುವುದು ಹಾಗೂ ತಾಲೂಕು, ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ಅದರದ್ದೇ ಆದ ಯೋಜನೆ ಮತ್ತು ಅಭಿವೃದ್ಧಿ ಸಮಿತಿಗಳ ಮೂಲಕ ಈ ಮುನ್ನೋಟ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಪೂರಕ ಸಹಕಾರ ನೀಡಲು ಅವಕಾಶ ಕಲ್ಪಿಸಲಾಗಿದೆ.

ಈ ಎಲ್ಲ ಶಿಫಾರಸುಗಳ ಜತೆಗೆ ಜನಪ್ರತಿನಿಧಿಗಳ ಆಸ್ತಿಯ ಘೋಷಣೆಯ ಮೂಲಕ ಜನರಿಗೆ ಉತ್ತರದಾಯಿತ್ವ, ಪಟ್ಟಣ ಮತ್ತು ನಗರ ಯೋಜನೆ, ಮಹಿಳೆಯರ ಭಾಗವಹಿಸುವಿಕೆಗೆ ಹೊಂದಿಕೆಯಾಗುವ ವಾತಾವರಣ ಕಲ್ಪಿಸುವುದು ಸಮುದಾಯದ ಸಾಮರಸ್ಯ (ಕೋಮು ಸೌಹಾರ್ದ), ಲೈಂಗಿಕ ಕಿರುಕುಳಗಳ ಬಗ್ಗೆ ವರದಿ ಮಾಡುವುದು, ಅಲ್ಪ$ಸಂಖ್ಯಾಕರ ಹಕ್ಕುಗಳ ಸಂರಕ್ಷಣೆ, ಮಕ್ಕಳ ಹಕ್ಕುಗಳು ಮತ್ತು ಭಾಗವಹಿಸುವಿಕೆಯನ್ನು ಎತ್ತಿ ಹಿಡಿಯಲಾಗಿದೆ.

ಸಮಿತಿಯ ವರದಿಯ ಕೆಲವು ಶಿಫಾರಸುಗಳು ಈ ತಿದ್ದುಪಡಿ ಮಸೂದೆಯಲ್ಲಿ ಕೈಬಿಟ್ಟುಹೋದರೂ ಹಾಗೂ ಕೆಲವು ನಕಾರಾತ್ಮಕ ಅಂಶಗಳು ಸೇರ್ಪಡೆಗೊಂಡರೂ, ಸ್ಥಳೀಯ ಸರ್ಕಾರಗಳು ನಿಜವಾಗಿಯೂ ಗಟ್ಟಿಯಾಗಿ ನಿಂತರೆ ಮತ್ತು ತಮ್ಮ ಗ್ರಾಮ ಸಭೆಗಳ ಇಚ್ಛೆಗಳಿಗೆ ಪೂರಕವಾಗಿ ಕಾರ್ಯನಿರ್ವಹಿಸಿದರೆ ಮಸೂದೆಯ ಆಶಯವಾದ ಗ್ರಾಮ ಸ್ವರಾಜ್ಯದ ನಿಜವಾದ ಸ್ಥಾಪನೆ ಸಾಧ್ಯವಾಗುತ್ತದೆ. ಗ್ರಾಮ ಪಂಚಾಯತ್‌ಗಳ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರು ಈ ಮಸೂದೆಯ ಸಾರವನ್ನು ಗೌರವದಿಂದ ಅರ್ಥೈಸಿಕೊಂಡು ದೃಢತೆ, ಪರಿಶ್ರಮದಿಂದ ಭ್ರಷ್ಟಾಚಾರ ರಹಿತ, ಜಾತ್ಯತೀತ ಮತ್ತು ಪ್ರಜಾಸತ್ತೀಯ ಸಮಾಜವಾದಿಗಳಾಗಿ, ಎಲ್ಲ ನಾಗರಿಕರ ಹಕ್ಕುಗಳನ್ನು ಗೌರವಿಸುವ ಹಾಗೂ ರಕ್ಷಿಸುವಂತಹ ಭಯ ಮುಕ್ತ ವಾತಾವರಣದೊಂದಿಗೆ, ಜನಸ್ನೇಹಿ ಗ್ರಾಮ ನಿರ್ಮಾಣದಲ್ಲಿ ತೊಡಗಿಸಿಕೊಂಡರೆ ನಮ್ಮೆಲ್ಲಾ ಪಂಚಾಯತ್‌ಗಳು ಸರ್ಕಾರದ ವಿವಿಧ ಸ್ತರಗಳಿಗೆ ಉತ್ತಮ ಉದಾಹರಣೆಗಳಾಗುವುದರಲ್ಲಿ ಹಾಗೂ ಬಹುಶಃ ಅವರ ಆಡಳಿತ ವೈಖರಿಯ ಮೇಲೆ ಸಕಾರಾತ್ಮಕ ಪ್ರಭಾವ ಬೀರುವುದರಲ್ಲಿ ಸಂಶಯವಿಲ್ಲ.

ಈ ಹೊಸ ವರ್ಷದ ಹೊಸ್ತಿಲಲ್ಲಿ ಕಂಡ ಬದಲಾವಣೆಯ ಕನಸು ನನಸಾಗಲಿ.

ಸುರೇಶ್ ಗೌಡ